ಈ ಯೋಜನೆಯ ಸಣ್ಣ ನೀರಾವರಿ ಕೆಲಸಗಳಲ್ಲಿ ಅಕ್ರಮಗಳು ನಡೆದಿವೆಯೆಂದು ವಿಧಾನ ಸಭಾ ಸದಸ್ಯರಾದ ಶ್ರೀ ಕೆ. ಹೆಚ್. ಹನುಮೇಗೌಡರು ೧೭-೬-೮೦ರಲ್ಲಿ ಸರ್ಕಾರಕ್ಕೆ ದೂರು ಕೊಟ್ಟಿದ್ದರ ಮೇರೆಗೆ ಈ ಬಗ್ಗೆ ಜಿಲ್ಲಾಧಿಕಾರಿಗಳಿಂದ ಪರಿಶೀಲನೆ ನಡೆದಿರುತ್ತೆ. ಜಿಲ್ಲಾಧಿಕಾರಿಗಳ ಪರಿಶೀಲನಾ ವರದಿಯು ದಿನಾಂಕ ೧೯-೯-೮೦ರಲ್ಲಿ ಸರ್ಕಾರಕ್ಕೆ ಬಂದಿರುತ್ತದೆ.

ಜಿಲ್ಲಾಧಿಕಾರಿಗಳಿಂದ ಬಂದ ವರದಿಯ ಮೇಲೆ ಉದ್ಯೋಗ ದೃಢೀಕರಣ ಯೋಜನೆ ಕೆಲಸಗಳನ್ನು ಇಲಾಖೆಯ ಹಿರಿಯ ಲೆಕ್ಕಪರಿಶೋಧನಾಧಿಕಾರಿಗಳಿಂದ ಪರಿಶೀಲಿಸಲಾಯಿತು. ಈ ವಿಷಯದಲ್ಲಿ ಮುಂದಿನ ಕ್ರಮ ಸರಕಾರದ ಪರಿಶೀಲನೆಯಲ್ಲಿದೆ.

Plying of Buses in Hassan District

4.(37) SRI K. H. HANUME GOWDA (Hassan).—SRI J. D. SOMAPPA (Sakalespur) and SRI D. B. GANGADHARAPPA (Arasikere).—Will the Minister for Transport and Minor Irrigation be pleased to State.—

(a) whether it is a fact that Buses to Hassan District are not plying as per the Scheduled timings,

(b) whether it had come to the notice of Government the Buses are stopped due to breakdown and machinery troubles,

(c) if so, measures taken by Government to avoid this inconvenience ?

SRI M.M. J. SADYOJATHA.—(Minister for Transport & Minor Irrigation).—

(a) About 30% of the buses are not being operated as per the Scheduled timings.

(b) Yes on certain occasion.

(c) (i) Tightening the vehicle maintenance programme in the workshops.

ii) Initiating action against the crew who unauthorisedly absent from duty.

ಹಾಸನದ ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆಯ ಬಗ್ಗೆ

೫. (೩೮) ಶ್ರೀ ಕೆ.ಎಚ್. ಹನುಮೇಗೌಡ (ಹಾಸನ).—ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತಿರಾಜ್ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸ ವರೆ.—

(ಅ) ಹಾಸನ ಕ್ಷೇತ್ರದ ಶಾಂತಿಗ್ರಾಮ, ಕಟ್ಟಾಯ, ಕಸಬ ಹೋಬಳಿಗಳ ಯಾವ ಯಾವ ಗ್ರಾಮಗಳಲ್ಲಿ ಗ್ರಾಮಾಂತರ ಪ್ರದೇಶದ ಕುಡಿಯುವ ನೀರಿನ ಯೋಜನೆಯು ಯಾವ ಯಾವ ತಾರೀಖಿನಲ್ಲಿ ಕಾರ್ಯಗತವಾಗಿದೆ,

(ಆ) ಯಾವ ಯಾವ ಗ್ರಾಮಗಳ ಈ ಯೋಜನೆಯು ಯಾವ ಯಾವ ತಾರೀಖಿನಿಂದ ನಿಂತು ಹೋಗಿದೆ.